ಅಧ್ಯಕ್ಷರು : ಈಗ ರಾಜು ಯಾರ ವಶದಲ್ಲಿದ್ದಾರೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಕ್ಕೀರನ್ ಗೋಪಾಲ್ ಸಂಗಡ ಇದ್ದಾನೆ, ಬರುತ್ತಾನೆ ತೊಂದರೆ ಏನೂ ಇಲ್ಲ ಬಾಕಿಯವರೂ ಸೇಫ್ ಇದ್ದಾರೆ ತೊಂದರೆ ಇಲ್ಲ, ಮುಂದೆ ಏನಾಗುತ್ತದೆಯೇ ನೋಡೋಣ.

ಅಧ್ಯಕ್ಷರ ಅನುಮತಿ ಮೇರೆಗೆ

ಲೋಕಸಭಾ ಸದಸ್ಯರೊಬ್ಬರು ಮುಖ್ಯಮಂತ್ರಿಗಳ ಮೇಲೆ ಗುರುತರವಾದ ಮಾತುಗಳನ್ನಾಡಿರುವ ಬಗ್ಗೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೇ, ನಾನು ಮಾಜಿ ಪೋಲೀಸ್ ಅಧಿಕಾರಿ ಹಾಲಿ ಲೋಕಸಭಾ ಸದಸ್ಯರೊಬ್ಬರು ಈ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಗುರುತರವಾದ ಮಾತು ಆಡಿದ್ದಾರೆ. ಮುಖ್ಯಮಂತ್ರಿಗಳು ರಾಜ್ಯದ ಸಮಗ್ರ ಜನತೆಯ ಮುಖ್ಯಮಂತ್ರಿಗಳೇ ಹೊರತು ಅವರು ಯಾವುದೇ ಪಕ್ಷದ ಮುಖ್ಯಮಂತ್ರಿಯಲ್ಲ. ಆ ಹೇಳಿಕೆ "ಮುಖ್ಯಮಂತ್ರಿ ಜೆಎಚ್ ಪಟೇಲರಿಗೆ ಬುದ್ಧಿ ಸ್ಥಿಮಿತದಲ್ಲಿಲ್ಲ, ಅವರನ್ನು ಮನೋರೋಗ ತಜ್ಞರಿಂದ ಪರೀಕ್ಷೆಗೊಳಪಡಿಸುವುದು ಒಳ್ಳೆಯದು ಎಂದು ಜನತಾದಳದ ಲೋಕಸಭಾ ಸದಸ್ಯ ಶ್ರೀ ಪಿ. ಕೋದಂಡರಾಮಯ್ಯ ಇಂದು ಇಲ್ಲಿ ಸಲಹೆ ಮಾಡಿದ್ದಾರೆ". ಇದು ಪತ್ರಿಕೆಗಳಲ್ಲಿ ಬಂದಿರುವುದು, ಮಿಕ್ಕ ಅನೇಕ ವಿಚಾರಗಳಿವೆ. ಗೌರವಾನ್ವಿತ ಲೋಕಸಭಾ ಸದಸ್ಯರು ಆಗಿದ್ದಾರೆ. ಮತ್ತು ಈ ರಾಜ್ಯದಲ್ಲಿ ಹಿರಿಯ ಪೋಲೀಸ್ ಅಧಿಕಾರಿಗಳಾಗಿ ಸುಮಾರು 30 ವರ್ಷಗಳ ಕಾಲ ಕೆಲಸವನ್ನೂ ಮಾಡಿದ್ದಾರೆ. ಅವರು ಮಾತನಾಡಿರತಕ್ಕಂತಹ ಮಾತು ಬಹಳ ಜವಾಬ್ದಾರಿಯಿಂದ ಮಾತನಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಅವರು ಮಾತನಾಡಿದಂತಹ ಮಾತಿನಲ್ಲಿ ತಲೆ ಕೆಟ್ಟು ಮಾತನಾಡಿದ್ದಾರೆಂದು ನಾನು ಹೇಳುವುದಿಲ್ಲ. ಬಹಳ ತಲೆ ಇಟ್ಟು ಕೊಂಡೇ ಮಾತನಾಡಿದ್ದಾರೆ ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಇದು ಅವರು ಎಲ್ಲೋ ಮರದ ಕೆಳಗೆ, ಅಥವಾ ಗಾಳಿ ಕೆಳಗೆ, ಅಡ್ಡಾದಿಡ್ಡಿಯಲ್ಲಿ ಹೇಳಿರುವಂತಹ ಮಾತಲ್ಲ, ಈ ಮಾತನ್ನು ನೇರವಾಗಿ ಪತ್ರಕರ್ತರಿಗೆ ಹೇಳಿರುವಂತಹ ಮಾತು. ಇದರಲ್ಲಿ ಭಾರತೀಯ ಸಂವಿಧಾನದ ಪ್ರಕಾರ ಸದಸ್ಯತ್ವದ ಅನರ್ಹತೆಗಳು ಏನಂದರೆ ಅವನು ಅಸ್ವಸ್ಥಚಿತ್ತನಾಗಿದ್ದರೆ, ಮತ್ತು ನ್ಯಾಯಾಲಯದಿಂದ ಹಾಗೇನಾದರೂ ಘೋಷಿಸಿದ್ದರೆ, ಅಂತವನು ಸದಸ್ಯತ್ವಕ್ಕೆ ಅನರ್ಹನೂ ಎಂಬುದು ಸಂವಿಧಾನದಲ್ಲಿ ಇದೆ. ಅಂದ ಮೇಲೆ ನಾನು ತಮಗೆ ಹೇಳುತ್ತಾ ಇದ್ದೇನೆ, ಅವರು ಹೇಳಿದಂಥ ಮಾತು ಈ ಒಂದು ಸದನದ ಹಕ್ಕುಚ್ಯುತಿ ಆಗುತ್ತದೆ. ಮತ್ತು ಈ ಸದನದ ಗೌರವಕ್ಕೂ ಭಂಗ ಬರುತ್ತದೆ. ಹಕ್ಕುಚ್ಯುತಿ ಒಂದೇ ಅಲ್ಲ ಈ ಸದನದ ಗೌರವಕ್ಕೆ ಮತ್ತು ಈ ಸದನದ ಸಾರ್ವಭೌಮತ್ವಕ್ಕೂ ಇದು ಒಂದು ರೀತಿಯ ಕಳಂಕ ತರುತ್ತದೆ. ಆದುದರಿಂದ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಲೋಕಸಭಾ ಸದಸ್ಯ ಶ್ರೀ ಕೋದಂಡ ರಾಮಯ್ಯನವರು ಹೇಳಿದಂತಹ ವಿಚಾರವಾಗಿ ನಾನು ಇವತ್ತಿನ ದಿವಸ ಹಕ್ಕುಚ್ಯುತಿಯ ನಿರ್ಣಯವಾಗಿ ಮಂಡಿಸುತ್ತಾ ಇದ್ದೇನೆ. ಇದಕ್ಕೆ ಪೂರ್ವವಾಗಿ ಕೆಲವು ವಿಚಾರಗಳನ್ನು ಪ್ರಸ್ತಾವಕ್ಕೆ ತಮ್ಮ ಗಮನಕ್ಕೆ ತರಬೇಕೆಂದು ಹೇಳುತ್ತಾ ಇದೇನೆ. ಒಂದು ತಾವು ತೀರ್ಮಾನ ಮಾಡಬೇಕು. ಈ ಮಾತನ್ನು ಹೇಳಿರತಕ್ಕಂತವರು ಯಾರೂ ಎಂದು ತೀರ್ಮಾನ

ಮಾಡಬೇಕು. ಅದು ನಿಜವಾಗಿ ಇದ್ದರೆ ಅವರು ಈ ಸದನದಲ್ಲಿ ಸದಸ್ಯರಾಗಿ ಇರುವುದಕ್ಕೆ ಸಾಧ್ಯವಿಲ್ಲ. ಶ್ರೀ ಕೋದಂಡರಾಮಯ್ಯನವರು ಹೇಳಿರತಕ್ಕಂತಹ ಮಾತು ನಿಜವೇ ಆಗಿದ್ದರೆ ಮುಖ್ಯ ಮಂತ್ರಿಗಳು ಒಂದು ನಿಮಿಷ ಕೂಡ ಈ ಸದನದಲ್ಲಿ ಇರುವುದಕ್ಕೆ ಆಗುವುದಿಲ್ಲ. ಈ ಸದನದಲ್ಲಿ ಯಾರ್ಯಾರು ಇರಬೇಕು ಎಂದು ತೀರ್ಮಾನ ಮಾಡತಕ್ಕಂತವರು ತಾವು. ಅಂದ ಮೇಲೆ ಇದು ಸಾರ್ವಜನಿಕ ಪತ್ರಿಕೆಗಳಲ್ಲಿ ಬಂದಿರುವುದನ್ನು ತಾವು ಗಮನಿಸಿರಬಹುದು. ಆದರೂ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಿಮ್ಮ ನಿರ್ದೇಶನ ಏನು ಇಲ್ಲಾ, ಅವರು ಹೇಳಿರತ್ಕಕಂತಹ ಮಾತು ನಿಜವೇ, ಪ್ರಾಮಾಣಿಕವೇ ಅದಕ್ಕೆ ಏನು ಎಂದು ತೀರ್ಮಾನ ಮಾಡುವುದಾದರೆ, ಅವರು ಈ ಕ್ಷಣದಿಂದಲೇ ಈ ಸದನದ ಸದಸ್ಯರಾಗುವುದಕ್ಕೆ ಸಾಧ್ಯ ಇಲ್ಲ. ಸದಸ್ಯರಲ್ಲಾ ಎಂದ ಮೇಲೆ ಮುಖ್ಯಮಂತ್ರಿಗಳು ಆಗುವುದಕ್ಕೂ ಸಾಧ್ಯ ಇಲ್ಲ. ಇದು ಪ್ರಶ್ನೆ ಇರತಕ್ಕಂತಹದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ವಾದ ಮಾಡುವಂಥಾದ್ದು ಸರಿ. ಕಾನ್‌ಸ್ಟಿಟ್ಯೂಶನ್ ಪ್ರಕಾರ ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆ.

(ನಗು)

ಶ್ರೀ ಬಿ. ಎಸ್. ಯಡಿಯೂರಪ್ಪ : ಡಿಸ್‌ಕಷನ್ ಮಾಡಬೇಕಾದರೆ, ಲೈಟರ್‌ವೇನಲ್ಲಿ ತೆಗೆದುಕೊಳ್ಳದೆ ಸೀರಿಯಸ್ಸಾಗಿ ತೆಗೆದುಕೊಂಡರೆ ಅದಕ್ಕೆ ಒಂದು ಬೆಲೆ ಇರುತ್ತದೆ. ಬಹುಶಃ ಪತ್ರಿಕೆಯಲ್ಲಿ ಈ ರೀತಿ ಬೇಜವಾಬ್ದಾರಿಯಿಂದ ಬಂದರೆ ಅದು ಗೌರವ ತರುವಂತಹದ್ದು ಅಲ್ಲ.

ಶ್ರೀ ಎಂ. ಸಿ. ನಾಣಯ್ಯ : ಸಭಾಧ್ಯಕ್ಷರೆ, ಇಲ್ಲಿ ಹೇಳುತ್ತಿರುವಂತಹ ವಿಚಾರ ಬಹಳ ಗಂಭೀರವಾದಂತಹ ವಿಚಾರ. ನಾವು ಇದನ್ನು ಲಘುವಾಗಿ ಯೋಚನೆ ಮಾಡುವುದಾದರೆ ಲಘುವಾಗಿ ಮಾತನಾಡೋಣ. ಆದರೆ ಈ ಸದನದಲ್ಲಿ ಅಲ್ಲ. ಸದನದ ಹೊರಗಡೆ ಹೋಗಿ ನಾವು ಲಘುವಾಗಿ ಮಾತನಾಡೋಣ. ಅಂದರೆ ಅವರು ಹೇಳುತ್ತಿರುವಂತಹ ವಿಚಾರ ರಾಜ್ಯಾಂಗಬದ್ಧವಾಗಿದೆ, ರಾಜ್ಯಾಂಗಬದ್ಧವಾಗಿರುವಂತಹ ವಿಚಾರವನ್ನು, ಈ ಮನೆಯ ಸದಸ್ಯರಾಗಿ ಇರುವುದಕ್ಕೆ ಯಾರು ಅರ್ಹರು ಎಂಬುದನ್ನು ರಾಜ್ಯಾಂಗದಲ್ಲಿ ಹೇಳಿದೆ. ಈ ವಿಚಾರದಲ್ಲಿ ಅವರು ಚರ್ಚೆ ಮಾಡಿಕೊಂಡು ಹೋಗುತ್ತಿರುವಂತಹ ಸಂದರ್ಭದಲ್ಲಿ ಒಳಗಡೆ ಇದ್ದಾರೆ, ಅವರನ್ನು ಡಿಸ್‌ಕ್ವಾಲಿಫೈಡ್ ಮಾಡಲಿಕ್ಕೆ ಅಧಿಕಾರ ನೀಡಿದೆ ಎಂದು ಹೇಳತಕ್ಕಂತಹದ್ದನ್ನು ನಾನು ಹೇಳುತ್ತಾ ಇದ್ದೇನೆ. ಬೇಕಾದರೆ ಅದನ್ನು ಹೊರಗಡೆ ಲೋಕಾರೂಢಿಯಾಗಿ ಮಾತನಾಡೋಣ. ಆದರೆ ಈ ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿ ಇಷ್ಟೊಂದು ಲಘುವಾಗಿ ಈ ವಿಚಾರದಲ್ಲಿ ಮಾತನಾಡುತ್ತಿರುವಂತಹದ್ದು ಈ ಸಭೆಗೆ ಗೌರವಕ್ಕೆ ಅದು ಬೆಲೆ ತರುವಂತಹದ್ದು ಅಲ್ಲ. ಈ ಚರ್ಚೆಗೂ ಕೂಡ ಗಾಂಭೀರ್ಯ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಆ ಅರ್ಥದಲ್ಲಿ ತೆಗೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ನೀವು ಮುಂದೆ ಬಳಸಿಕೊಂಡು ಹೋಗಿ ಹೇಳುವಂತಹ ಸಂದರ್ಭದಲ್ಲಿ ಅರ್ಥವಾಯಿತು. ನನಗೆ ಅಷ್ಟಾದರೂ ಅರ್ಥವಾಗುತ್ತದೆ. ಸ್ವಲ್ಪವಾದರೂ ಗಾಂಭೀರ್ಯತೆಯನ್ನು ಕಾಪಾಡಿ.

ಅಧ್ಯಕ್ಷರು : ನಮಗೆ ಒಂದು ನೆಮ್ಮದಿ ಸಂಗತಿ ಎಂದರೆ ಅಪರೂಪಕ್ಕೆ ಅಂದರೆ ಎರಡೂವರೆ ವರ್ಷದಲ್ಲಿ ಸನ್ಯಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಸಂಸದೀಯ ವ್ಯವಹಾರ ಸಚಿವರು ಒಂದೇ ಅಭಿಪ್ರಾಯ ಹೊಂದಿದ್ದಾರೆ. ಈ ಒಂದು ವಿಚಾರದಲ್ಲಿ ಆದರೂ ಅವರಿಬ್ಬರಿಗೂ ಸಹಮತ ಇದೆ. ಇದು ಒಂದು ಸಂತೋಷದ ವಿಚಾರ.

SRI. M.C. NANAIAH : There is no point in raising this issue on the floor of the House. I don't know why the Hon'ble Speaker allowed this issue to be raised. Let this issue not be debated at all.

ಶ್ರೀ ವಾಟಾಳ್ ನಾಗರಾಜ್ : ಸಾರ್, ಇದರಲ್ಲಿ ಸಹಮತವನ್ನು ನಾವು ಇಬ್ಬರೂ ಹೊಂದಿದ್ದೇವೆ ಅವರು ಹೊಂದಿಲ್ಲ ಎನ್ನತಕ್ಕಂತಹ ಮಾತಲ್ಲ. ಇದು ಒಂದು ರಾಜ್ಯದ ಪ್ರಮುಖ ಪತ್ರಿಕೆಯಲ್ಲಿ ಬಂದಿರತಕ್ಕಂತಹ ವಿಚಾರ. ಇದನ್ನು ಲಘುವಾಗಿ ತೆಗೆದುಕೊಳ್ಳಲು ಅಥವಾ ಒಂದು ಸಹಮತಕ್ಕೆ ಬರತಕ್ಕಂಥದ್ದು ಏನಿದೆ? ಈ ವಿಚಾರದಲ್ಲಿ ತಾವು ಸಹ ಸಹಮತಕ್ಕೆ ಬರಬೇಕಾಗಿತ್ತು. ತಾವು ಈ ವಿಚಾರವನ್ನು ತಳ್ಳಿ ಹಾಕುವುದಕ್ಕೆ ಸಾಧ್ಯ ಇಲ್ಲ. ಅಷ್ಟು ಸುಲಭವಾಗಿ ತಳ್ಳಿ ಹಾಕುವುದಕ್ಕೆ ಸಾಧ್ಯವಿಲ್ಲ. ಸ್ವಾಮಿ, ತಮಗೆ ಪೂರ್ವಭಾವಿಯಾಗಿ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನಗೆ ಅನ್ನಿಸಿರುವುದನ್ನು ತಮಗೆ ಹೇಳುತ್ತಿದ್ದೇನೆ ಅಧ್ಯಕ್ಷರೇ, ನಾಳೇ ಅದೇ ರೀತಿ ಇಂತಹ ಹೇಳಿಕೆಗಳು ಬರತಕ್ಕಂತಹದ್ದು ನಿರ್ಮಾಣ ಆಗುವುದಾದರೆ, ನಾವು ಈ ಸದನದಲ್ಲಿ ಸಭೆ ನಡೆಸುವುದು ಕಷ್ಟವಾಗುತ್ತದೆ. ಸದನದಲ್ಲಿ ನಾವೆಲ್ಲರೂ ಕುಳಿತುಕೊಳ್ಳುವುದು ಕಷ್ಟವಾಗುತ್ತದೆ. ಒಬ್ಬ ಜವಾಬ್ದಾರಿಯುತವಾದ ವ್ಯಕ್ತಿ, ತಿಳುವಳಿಕೆ ಇರುವಂತಹ ವ್ಯಕ್ತಿ 30 ವರ್ಷಗಳ ಕಾಲ ರಾಜ್ಯದ ಹಿರಿಯ ಅಧಿಕಾರಿ ಆಗಿದ್ದಂತವರು ಹೊರಗಡೆ ಮಾತನಾಡುವಾಗ ಬಹಳ ಎಚ್ಚರಿಕೆಯಿಂದ ಮಾತನಾಡಬೇಕಾಗಿತ್ತು. ಆದರೆ ನಿವೃತ್ತರಾದ ತಕ್ಷಣ, ರಾಜಕೀಯಕ್ಕೆ ಬಂದ ತಕ್ಷಣ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭ ಮಾಡಿದ್ದಾರೆ. 30 ವರ್ಷಗಳ ಕಾಲ ಅಧಿಕಾರದಲ್ಲಿ, ಪೋಲೀಸ್ ಇಲಾಖೆಯಲ್ಲಿ ಇದ್ದದ್ದು ನಾವು ನೋಡಿದ್ದೇವೆ. ಅವರು ಆ ಸಮಯದಲ್ಲಿ ಏನೇನು ಮಾಡಿದ್ದಾರೆ, ಹೇಗೇಗೆ ಇದ್ದರು, ಅದನ್ನೆಲ್ಲಾ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಈಗ ಅವರು ಇಲ್ಲವಲ್ಲ ಡಿಫೆಂಡ್ ಮಾಡುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನನ್ನ ಜವಾಬ್ದಾರಿ ಏನು ಎಂಬುದನ್ನು ನಾನು ಮಾತನಾಡಬೇಕಲ್ಲ. ಒಬ್ಬ ರಾಜಕಾರಣಿ ಆಗಬೇಕಾದರೆ, ರಾಜಕೀಯ ಅಂದರೆ ಏನು, ರಾಜಕೀಯವಾಗಿ ಹೊರಗಡೆ ಏನು ಬೇಕಾದರೂ ಮಾತನಾಡಬಹುದು, ಯಾವ ರೀತಿಯಾದರೂ ಮಾತನಾಡಬಹುದು ಎನ್ನತಕ್ಕಂತಹ ನಿರ್ಣಯಕ್ಕೆ ನಾವು ಬರುವುದಾದರೆ ಮಾತನಾಡಲಿ, ಆದರೆ ಇಲ್ಲಿ ಅದು ನೇರವಾಗಿ ಹಕ್ಕುಚ್ಯುತಿ ಆಗುತ್ತದೆ. ಆದುದರಿಂದ ಅವರನ್ನು ಈ ಸದನಕ್ಕೆ ಕರಯಿಸಿ ಛೀಮಾರಿ ಹಾಕಬೇಕು. ಇಲ್ಲಾ ಅದನ್ನು ನೀವು ಹಕ್ಕುಚ್ಯುತಿ ಸಮಿತಿಗೆ ಕಳಿಸಬೇಕು. ಮತ್ತು ಅವರನ್ನು ಹಕ್ಕುಚ್ಯುತಿ ಸಮಿತಿ ಮುಂದೆ ಬರುವುದಕ್ಕೆ ಹೇಳಬೇಕು. ಏನಾದರೂ ಮಾಡಲೇಬೇಕು. ಇಲ್ಲದೆ ಹೋದರೆ ಅತ್ಯಂತ ಅಪರಾಧ ಆಗುತ್ತದೆ ಮತ್ತು ಈ ರೀತಿ ಮಾತನಾಡತಕ್ಕಂತಹದ್ದು ಒಳ್ಳೆಯ

ಸೂಚನೆ ಅಲ್ಲ. ನಾನು ತಮಗೆ ಹೇಳುತ್ತಾ ಇದ್ದೇನೆ. ರಾಜಕಾರಣ ಎಂದರೆ ತಮಗೆ ಗೊತ್ತಿದೆ, ತಾವು ಅನೇಕ ಸಭೆಯಲ್ಲಿ ಭಾಷಣ ಮಾಡಿದ್ದೀರಿ. ರಾಜಕಾರಣಿಗಳು ಅಂದರೆ ನಮ್ಮ ಮೇಲೆ ಜನಗಳು ಒಂದು ರೀತಿ ಕೆಟ್ಟ ಭಾವನೆಯಲ್ಲಿ ಇದ್ದಾರೆ, ಕೆಟ್ಟಾದಾಗಿ ಮಾತನಾಡುತ್ತಾ ಇದ್ದಾರೆ, ಜನಗಳಲ್ಲಿ ಒಂದು ಕೆಟ್ಟ ಅಭಿಪ್ರಾಯ ಬಂದಿದೆ ಎಂದು. ನಾನು ಹೇಳುವುದು ಮೊದಲನೆಯದಾಗಿ ಒಬ್ಬ ಅಧಿಕಾರಿ ಆಗಿರತಕ್ಕಂತವರು ನಿವೃತ್ತಿ ಆದ ತಕ್ಷಣ ರಾಜಕೀಯಕ್ಕೆ ಬರತಕ್ಕಂತದ್ದನ್ನು ತಳ್ಳಿಹಾಕುತ್ತೇನೆ ಅನ್ನುವುದು ತಿದ್ದುಪಡಿ ಆಗಬೇಕು, ಚುನಾವಣೆ ಕಾನೂನು ತಿದ್ದುಪಡಿ ಆಗಬೇಕು ಅದು ನೋಡೋಣ, ದೇಶದಲ್ಲಿ ಏನೇನು ಆಗುತ್ತದೆ ಆ ಪ್ರಶ್ನೆ ಬೇರೆ. ಆದರೆ ನಾವು ಮಾತನಾಡತಕ್ಕಂತಹ ಮಾತು ಎಷ್ಟು ಲಘುವಾಗಿ ಮಾತನಾಡುವಂತಹದ್ದು ಎಂಬ ದೃಷ್ಟಿಗೆ ಹೋಗಬೇಕಾಗುತ್ತದೆ. ಈ ರಾಜ್ಯದ ಮುಖ್ಯಮಂತ್ರಿ ಆಗಿರುವಂತವರನ್ನ ನಾವು ಹುಚ್ಚರು ಎನ್ನುವಂತಹ ರೀತಿಯಲ್ಲಿ ಕರೆಯುವಂತಹ ವಿಧಾನಕ್ಕೆ ನಾವು ಹೋಗುವುದಾದರೆ ಈ ಕ್ಷಣದಲ್ಲಿ ಈ ಸದನದಲ್ಲಿ ಅವರು ಇರುವುದಕ್ಕೆ ಸಾಧ್ಯ ಇಲ್ಲ. ಆದುದರಿಂದ, ತಾವು ಆ ಮನುಷ್ಯ ಯಾರು, ಈ ಮಾತನ್ನು ಯಾರು ಹೇಳಿದ್ದಾರೆ ಅವರನ್ನು ಈ ಸದನಕ್ಕೆ ಕರೆಸಬೇಕು.

ಅಧ್ಯಕ್ಷರು : ನಿಮ್ಮ ಮಾತಿನಿಂದ ನನಗೆ ಏನು ಅನ್ನಿಸುತ್ತಿದೆ ಎಂದರೆ, ಪತ್ರಿಕಾ ಹೇಳಿಕೆಯನ್ನು ಆಧಾರವಾಗಿ ಇಟ್ಟುಕೊಂಡು ತಾವು ಈ ವಾದವನ್ನು ಮಂಡಿಸುತ್ತಿದ್ದೀರಾ. ಒಂದು ವೇಳೆ ಅವರನ್ನು ಕರೆಯಿಸಿ ಕೇಳಿದರೆ, ಅವರು ಹೇಳುತ್ತಾರೆ, ಈ ಹೇಳಿಕೆ ನನ್ನದಲ್ಲ ಎಂದು. ಆಗ ನಾವು ಏನು ಮಾಡಬೇಕು? ಅವರೇ ಹೇಳಿದ್ದು ಎಂದು ನಮಗೆ ಹೇಗೆ ಗೊತ್ತಾಗಬೇಕು?

ಶ್ರೀ ವಾಟಾಳ್ ನಾಗರಾಜ್ : ಹೌದಾ? ಹಾಗಾದರೆ ಇವರು ಪತ್ರಿಕೆಯಲ್ಲಿ ಹೇಳಿರುವಂತಹ ದಿನಾಂಕವನ್ನು ತಮಗೆ ತಿಳಿಸುತ್ತೇನೆ. ಇದು ಎರಡನೆಯ ತಾರೀಖಿನಲ್ಲಿ ಹೇಳಿರುವುದು. ಇವತ್ತು 6ನೇ ತಾರೀಖು. ಇದುವರೆವಿಗೂ ಅವರು ಪತ್ರಿಕೆಯನ್ನು ಓದಿದ್ದಾರೆ. ಆ ರೀತಿಯಾಗಿ ನಾನು ಹೇಳಿಲ್ಲ ಎಂದು ಎಂದೂ ಹೇಳಿಲ್ಲ. ಪತ್ರಿಕೆ ಓದಿದ ಮೇಲೆ ನಾನು ಇಂತಹ ಮಾತನ್ನು ಹೇಳಿಲ್ಲ ಎಂದು ಹೇಳಬಹುದಾಗಿತ್ತಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ ಪತ್ರಿಕಾ ಹೇಳಿಕೆಯನ್ನು ಖಂಡನೆ ಮಾಡಿದ್ದಾರೆ. ಅದು ಆದ ಮೇಲೂ ಕೂಡ ಆ ಹೇಳಿಕೆ ಕೊಟ್ಟಿರತಕ್ಕಂತಹ ವ್ಯಕ್ತಿ ಇದು ಅಲ್ಲ ನಾನು ಹೇಳಿಲ್ಲ . ಇಲ್ಲ ಎಂದು ಎಲ್ಲೂ ಹೇಳಿಲ್ಲ. ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟಿದ್ದಾರೆ. ಅದನ್ನು ನಿರಾಕರಣೆ ಮಾಡಿ ಅದಕ್ಕೆ ಕೌಂಟರ್ ಆಗಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಮುಖ್ಯಮಂತ್ರಿಗಳು. ಮುಖ್ಯಮಂತ್ರಿಗಳು ನಿರಾಕರಣೆ ಮಾಡಿ ಹೇಳಿದಾಗ, ಈ ಹೇಳಿಕೆ ಕೊಟ್ಟಿರತಕ್ಕಂತಹ ವ್ಯಕ್ತಿ ನಿರಾಕರಣೆ ಮಾಡಿಲ್ಲ ಎಂದರೆ ನಾನು ಹೇಳಿರುವುದು ಸತ್ಯ ಎಂದು ಗೊತ್ತಾಗಿದೆ. ಆದಕಾರಣ ಅವನು ನಿರಾಕರಣೆ ಮಾಡಿಲ್ಲ.

ಅಧ್ಯಕ್ಷರು : ಆಯಿತು, ವಾಟಾಳ್ ಅವರು ಮುಂದುವರೆಸಿ.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ತಮಗೆ ನಾನು ಹೇಳುತ್ತೇನೆ ಇದು ಸಂಪೂರ್ಣವಾಗಿ ಪ್ರೈಮಾ ಫೇಸಿ ಇದೆ ಇದರಲ್ಲಿ ಬೇರೆ ಮಾತೇ ಇಲ್ಲ.

MR. SPEAKER : The whole problem is, Madam, I have to rely on the paper statement.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ಕಮಿಟಿಗೆ ರೆಫರ್ ಮಾಡಿ, ಅವರು ನೋಟೀಸ್ ಕೊಡುತ್ತಾರೆ, ಅವರು ಹೇಳಿದ್ದಾರೋ ಇಲ್ಲವೋ ಎಂದು ನೋಡೋಣ. ಎನ್‌ಕ್ವಯರಿ ಅಂತೂ ಆಗಲಿ, ಮೇಲೂ ನೋಟಕ್ಕೆ ಪೇಪರ್‌ನಲ್ಲಿ ಅವರು ಹೇಳಿದ್ದು ಇದೆ. ಅದಕ್ಕೆ ಅವರು ಡಿನೈ ಮಾಡಿಲ್ಲ, ಇವತ್ತಿನವರೆವಿಗೂ ಮಾಡಿಲ್ಲ. ನಮಗೆ ಏನು ಭಯಾ ಅಂದರೆ ಅಧ್ಯಕ್ಷರೆ, ನಮ್ಮ ಮುಖ್ಯಮಂತ್ರಿಗಳು ಹುಚ್ಚರಾದರೆ ನಾವೆಲ್ಲಾ ಏನಾಗಬೇಕಾಗುತ್ತದೆ? ಏಕೆಂದರೆ ಜನ ಪೇಪರ್ ಓದುತ್ತಾ ಇರುತ್ತಾರೆ. ಆದ್ದರಿಂದ ಒಂದು ಸಲ, ಅಲ್ಲ ಅನ್ನುವುದು ತೀರ್ಮಾನವಾಗಬೇಕಲ್ಲ. ಕರ್ನಾಟಕದ ಮುಖ್ಯಮಂತ್ರಿಗಳು ಹುಚ್ಚರಲ್ಲ. ಕರ್ನಾಟಕದ ಮುಖ್ಯಮಂತ್ರಿಗಳ ನಿಜವಾಗಿಯೂ ಕೂಡ ಒಳ್ಳೆಯವರು, ಬುದ್ಧಿವಂತರು, ಅವರು ಸರಿಯಾಗಿ ಬುದ್ಧಿ ಸ್ಥಿಮಿತದಲ್ಲಿ ಇದ್ದಾರೆ ಎಂದು ಜನರಿಗೆ ಗೊತ್ತಾಗಬೇಕಲ್ಲ ಅಧ್ಯಕ್ಷರೆ, ಆದ್ದರಿಂದ ಇದು ಮೇಲು ನೋಟಕ್ಕೆ ಸರಿಯಾಗಿ ಕಾಣುವುದರಿಂದ ಇದನ್ನು ಪ್ರಿವಿಲೇಜ್ ಕಮಿಟಿಗೆ ತಾವು ರೆಫರ್ ಮಾಡಿ. ರೆಫರ್ ಮಾಡಿದ ಮೇಲೆ ಇಬ್ಬರನ್ನೂ ಕರೆಯುತ್ತಾರೆ ಯಾರ್ಯಾರು ಏನು ಎಂದು ವಿಚಾರಿಸುತ್ತಾರೆ.

5.10 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ಅದಕ್ಕೋಸ್ಕರ ನಾನು ಈ ನಿರ್ಣಯವನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ನಿರ್ಣಯವೇನೆಂದರೆ, "ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರಿಗೆ ಬುದ್ಧಿ ಸ್ಥಿಮಿತದಲ್ಲಿಲ್ಲದಿರುವುದರಿಂದ ಅವರನ್ನು ಮನೋರೋಗ ತಜ್ಞರಿಂದ ಚಿಕಿತ್ಸೆಗೊಳಪಡಿಸುವುದು ಒಳ್ಳೆಯದೆಂದು ಲೋಕಸಭಾ ಸದಸ್ಯರಾದ ಪಿ. ಕೋದಂಡರಾಮಯ್ಯನವರು ಹೇಳಿದ್ದಾರೆ. ಬುದ್ಧಿ ಸ್ಥಿಮಿತದಲ್ಲಿಲ್ಲದವರು ಈ ಸದನದಲ್ಲಿ ಸದಸ್ಯರಾಗಿರಲು ಅರ್ಹರಾಗಿರುವುದಿಲ್ಲ. ಶ್ರೀ ಪಿ. ಕೋದಂಡರಾಮಯ್ಯನವರ ಮಾತು ಸತ್ಯಕ್ಕೆ ದೂರವಾದ ಸಂಗತಿಯಾಗಿದ್ದು, ಈ ಸಭೆಯ ಗೌರವಕ್ಕೆ ಚ್ಯುತಿಯುಂಟಾಗಿರುವುದರಿಂದ ಹಕ್ಕುಚ್ಯುತಿ ಕುರಿತು ಪಸ್ತಾಪಿಸಲು ಅವಕಾಶ ಮಾಡಿ ಕೊಟ್ಟು, ನಿರ್ಣಯವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಬೇಕೆಂದು" ನನ್ನ ಒತ್ತಾಯವಿರುವುದರಿಂದ ತಾವು ದಯಮಾಡಿ ಇದನ್ನು ನೇರವಾಗಿ ಹಕ್ಕುಚ್ಯುತಿ ಸಮತಿಗೆ ಕಳುಹಿಸಬೇಕು ಮತ್ತು ಇದನ್ನು ತಡೆಹಿಡಿಯಬಾರದೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಅಲ್ಲದೆ, ಪತ್ರಿಕೆಯಲ್ಲಿ ಅವರು ಹೇಳಿರುವುದು ಪ್ರಕಟವಾಗಿರುವುದರ ಬಗ್ಗೆ ಇವೊತ್ತಿನವರೆವಿಗೂ ಸಹ ಯಾವುದೇ ಕಾರಣಕ್ಕೂ ನಾನು ಆ ರೀತಿ ಹೇಳಿಲ್ಲವೆಂದು. ಅವರು ಅಲ್ಲಗೆಳೆದಿಲ್ಲ.

ಶ್ರೀ ಡಿ. ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಹೇಳಿರುವುದಕ್ಕೆ ನನ್ನದೇನೂ ತಕರಾರಿಲ್ಲ.. ಆದರ, ನಾನು ಹಿಂದೊಮ್ಮೆ ಒಬ್ಬ ಲೋಕಸಭಾ ಸದಸ್ಯರ ಬಗ್ಗೆ ಚರ್ಚಿಸಲು ಹೋದಾಗ 'ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲಿಲ್ಲ' ವೆಂದು ತಿಳಿಸಿ ನನಗೆ ಅವಕಾಶ ಕೊಡಲಿಲ್ಲ. ಇವೊತ್ತು ತಾವು ಈ ವಿಷಯದಲ್ಲಿ ಹೇಗೆ ಅವಕಾಶ ಮಾಡಿಕೊಡುತ್ತಿದ್ದೀರೋ ನನಗರ್ಥವಾಗುತ್ತಿಲ್ಲ.

ಅಧ್ಯಕ್ಷರು : ಶಿವಕುಮಾರ್‌ರವರೇ, ಇಲ್ಲಿ ಲೋಕಸಭಾ ಸದಸ್ಯರ ವಿಚಾರವಾಗಿ ಚರ್ಚಿಸುತ್ತಿಲ್ಲ. ಈ ಸದನದ ಸದಸ್ಯರಾಗಿರುವ ಸಭಾ ನಾಯಕರ ಕುರಿತಾಗಿ, ಅವರು ಕೊಟ್ಟಿರುವ ಹೇಳಿಕೆ ಕಾರಣದಿಂದಾಗಿ ಹೇಳಿಕೆ ಕೊಟ್ಟಿರುವವರು ಅವರಾಗಿರುವುದರಿಂದ ಆ ಬಗ್ಗೆ ನಾನು ಚರ್ಚಿಸಬೇಕಾಗಿ ಬಂದಿದೆ ಅಷ್ಟೆ. ನೀವು ಹಿಂದೊಮ್ಮೆ ಹೇಳಿರುವ ಪ್ರಸಂಗ ನನಗೆ ನೆನಪಿದೆ. ಯಾರು ಈ ಸದನದ ಸದಸ್ಯರಲ್ಲವೋ, ಯಾವ ವಿಷಯ ಈ ಸದನಕ್ಕೆ ಸಂಬಂಧಿಸಿಲ್ಲವೋ ಆ ಬಗ್ಗೆ ನಾವು ವಿಷಯ ಚರ್ಚಿಸುವುದು ಸಾಧ್ಯವಿಲ್ಲವಾದ್ದರಿಂದ ಅದಕ್ಕೋಸ್ಕರ ಬೇಡವೆಂದು ಆಗ ಹೇಳಿದ್ದೆ.

ಶ್ರೀ ವಾಟಾಳ್ ನಾಗರಾಜ್ : ಈಗ ನಾನು ನಿರ್ಣಯ ಮಂಡಿಸುತ್ತಿರುವುದರಿಂದ ದಯವಿಟ್ಟು ಇದಕ್ಕೆ ಅನುಮತಿ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ತಾವು ನಿರ್ಣಯವನ್ನು ಕಳುಹಿಸಿಕೊಡಿ, ಮತ್ತು ತೀರ್ಪು ನೀಡಲು ನನಗೆ ಸ್ವಲ್ಪ ಸಮಯ ಕೊಡಿ, ಸೋಮವಾರದೊಳಗೆ ನನ್ನ ತೀರ್ಪು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಕಾಲಾವಕಾಶ ತೆಗೆದುಕೊಳ್ಳಬಾರದೆಂದಲ್ಲ, ಇದರಲ್ಲಿ ಕಾಲಾವಕಾಶ ತೆಗೆದುಕೊಳ್ಳವಂಥಾದ್ದೇನಿದೆ? ಈ ಬಗ್ಗೆನೇರವಾಗಿ ಪತ್ರಿಕೆಯಲ್ಲಿ ಬಂದಿದೆ. ಹೇಳಿಕೆಯಿತ್ತವರು ಇದುವರೆವಿಗೂ ಅದನ್ನು ಅಲ್ಲಗಳೆದಿಲ್ಲದಿರುವುದರಿಂದ ತೀರ್ಪು ನೀಡಲು ನನಗೆ ಸೋಮವಾರದವರೆಗೆ ಅವಕಾಶ ಕೊಡಿ ಎಂದು ಏಕೆ ಕೇಳುತ್ತಿದ್ದೀರೆಂದು ನನಗರ್ಥವಾಗಿಲ್ಲ.

ಅಧ್ಯಕ್ಷರು : ಇವೊತ್ತು ಸದನವನ್ನು ಮುಂದೂಡಿದರೆ ಪುನ: ಸೋಮವಾರವೇ ನಾವು ಸಮಾವೇಶಗೊಳ್ಳುವುದು. ಈಬಗ್ಗೆ ತಾವು ಮೊದಲೇ ನನ್ನ ಹತ್ತಿರ ಚರ್ಚಿಸಿ ಇವೊತ್ತು ಸದನದಲ್ಲಿ ಪ್ರಸ್ತಾಪಿಸಿದ್ದೀರಿ. ಇದು ಬಹಳ ಗಂಭೀರ ವಿಚಾರವಾಗಿರುವುದರಿಂದ ನಾನು ಅಧಿಕಾರಿಗಳೊಂದಿಗೆ ಚರ್ಚಿಸಿ, ಹಿಂದಿನ ಸಭಾಧ್ಯಕ್ಷರುಗಳು ಇಂತಹ ಸನ್ನಿವೇಶಗಳಲ್ಲಿ ಏನು ಮಾಡಿದ್ದರು ಎಂಬುದನ್ನು ಕುರಿತು ಪುಸ್ತಕದಲ್ಲಿರುವುದನ್ನು ನೋಡಿ ಸೋಮವಾರದೊಳಗೆ ನಾನು ನಿರ್ಣಯ ತೆಗೆದು ಕೊಳ್ಳುತ್ತೇನೆ. ಏಕೆಂದರೆ, ದುಡುಕಿ ತೀರ್ಮಾನ ತೆಗೆದುಕೊಂಡೆ ಎಂದು ಆಗಬಾರದು. ತಮ್ಮ ವಾದವನ್ನು ನಾನು ಪೂರ್ಣವಾಗಿ ಆಲಿಸಿದ್ದು, ತೀರ್ಪು ನೀಡಲು ನನಗೆ ಸೋಮವಾರದವರೆಗೆ ಸಮಯ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಈ ನಿರ್ಣಯವನ್ನು ತಮಗೆ ಕಳಉಹಿಸಿಕೊಡುತ್ತೇನೆ.

ಗಮನ ಸೆಳೆಯುವ ಸೂಚನೆ

ಏಷಿಯನ್ ಏಜ್‌ಪತ್ರಿಕೆ ಮೇಲೆ ಧಾಳಿ ಮತ್ತು ಗುಂಡ್ಲುಪೇಟೆಯಲ್ಲಿ ಪತ್ರಕರ್ತ ಸತ್ಯನಾರಾಯಣರವರ ಕೊಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, 'ಏಷಿಯೆನ್ ಏಜ್' ಪತ್ರಿಕೆ ಮೇಲೆ ಧಾಳಿ ನಡೆದಿರುವುದು ಮತ್ತು ಗುಂಡ್ಲುಪೇಟೆಯಲ್ಲಿ ಪತ್ರಕರ್ತರಾಗಿದ್ದ ಸತ್ಯನಾರಾಯಣರವರ ಕೊಲೆಯಾಗಿರುವ ಬಗ್ಗೆ ನಾನು ಗೃಹ ಮತ್ತು ವಕ್ಫ್ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.